ಅಧ್ಯಕ್ಷರ ಕಛೇರಿಯಲ್ಲಿ ಕುಳಿತು ಚರ್ಚೆ ಮಾಡೋಣ. ತಾವು ಮತ್ತೊಂದು ಸಾರಿ ಕಾನೂನು ತಜ್ಞರ ಅಭಿಪ್ರಾಯವನ್ನು ಕೇಳಿ ಆಮೇಲೆ ಬೇಕಾದರೆ ಇದನ್ನು ಇಂಟ್ರೊಡ್ಯೂಸ್ ಮಾಡುವುದಕ್ಕೆ ನಮ್ಮ ಸಮ್ಮತಿ ಇದೆ ಎಂದು ಹೇಳಿದ ಮೇಲೂ ಕೂಡ ನೀವು ಮೊಂಡುತನ ಮಾಡಿಕೊಂಡು ಇಲ್ಲಾ ನಾವು ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವಂಥ ಆಜ್ಞೆ ಸರಿ ಇದೆ ಎಂದು ಹೇಳುವುದಾದರೆ ಈ ಒಂದು ಕಾನೂನು ಬಾಹಿರವಾಗಿರತಕ್ಕಂಥ ಶಾಸನವನ್ನು ತರುವುದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ ಎನ್ನುವುದು ಇತಿಹಸದಲ್ಲಿ ಬರುವುದು ಬೇಡ. ನಮಗೆ ಇದು ಒಪ್ಪಿಗೆ ಇಲ್ಲದೇ ಇರುವುದರಿಂದ ನಾವು ಸದನದಿಂದ ಹೊರಗಡೆಗೆ ಹೋಗುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಎಂ.ಪಿ.ವೆಂಕಟೇಶ್ : ಮಾನ್ಯ ಛೇರ್ಮನ್‌ರವರೆ, ಇದು ಇವರದು ಯಾವಾಗಲೂ ಕೂಡ ಮಾಮೂಲಿನ ಕತೆ. ಕೇವಲ ಪ್ರಚಾರ ಮಾಡಬೇಕಷ್ಟೆ ಹೊರತು ಬೇರೆ ಏನ ಕೆಲಸ ಇವರಗೆ ಇಲ್ಲ. ಸರ್ಕಾರ ನಡೆಸತಕ್ಕಂಥವರಿಗೆ ಕಾನೂನು ಗೊತ್ತಿರುವುದಿಲ್ಲವೆ ? ಇವರು ಕೇವಲ ಪ್ರಚಾರಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ದಿನ ಬೆಳಗಾದರೆ ಇವರದ್ದು ಪ್ರಚಾರವಷ್ಟೆ. ಬಡವರ ಬಗ್ಗೆ ಆಗಲಿ, ರೈತರ ಬಗ್ಗೆ ಆಗಲಿ ಕೆಲಸ ಮಾಡುವುದಕ್ಕೆ ಆಗಲಿ ಇವರು ಬಿಡುವುದಿಲ್ಲ.

(ಗೊಂದಲ)

ಛೇರ್ಮನ್ : ಈಗ ಶೂನ್ಯ ವೇಳೆ. ಮೊದಲಿಗೆ ಡಾ: ಕೆ.ಅನ್ನದಾನಿಯವರು ಮಾತನಾಡಿ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ :– ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸುವ ಬಗ್ಗೆ

ಡಾ:ಕೆ.ಅನ್ನದಾನಿ (ಮಳವಳ್ಳಿ) : ಸನ್ಮಾನ್ಯ ಛೇರ್ಮನ್‌ರವರೆ, ನಾನು ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ. ಪ್ರಾಥಮಿಕ ಹಂತದಿಂದ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸಬೇಕು ಎನ್ನತಕ್ಕಂಥ ಒಂದು ಉದ್ದೇಶವನ್ನು ಇಟ್ಟುಕೊಂಡು ಸರ್ಕಾರ ಒಂದು ಒಳ್ಳಯ ತೀರ್ಮಾನವನ್ನು ತೆಗೆದುಕೊಳ್ಳುವ ಹಂತದಲ್ಲಿದೆ. ಆದರೆ, ಇವತ್ತು ಕೆಲವು

ಹಿರಿಯ ಸಾಹಿತಿಗಳು ಅಂದರೆ ಇವತ್ತಿನದಿವಸ ಏನು ತಾವು ಬುದ್ಧಿವಂತರೆಂದು ಅನಿಸಿಕೊಂಡಿರತಕ್ಕಂಥ ಒಂದು ವರ್ಗ ಇಂದು ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಅಂದರೆ, ಪ್ರಥಮ ವರ್ಷದಿಂದ ಆಂಗ್ಲ ಭಾಷೆಯನ್ನು ಕಲಿಸಬಾರದು, ನಮ್ಮ ಭಾಷೆಗೆ ತೊಂದರೆ ಆಗುತ್ತದೆ ಮತ್ತು ನಮ್ಮ ಮಾಧ್ಯಮಕ್ಕೆ ತೊಂದರೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಒಳ್ಳೆಯದಲ್ಲ. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಉದಾಹರಣೆಗಳು ಬಹಳಷ್ಟಿವೆ. ಗ್ರಾಮಾಂತರ ಪ್ರದೇಶದಲ್ಲಿ ಕೂಲಿ ಮಾಡತಕ್ಕಂಥ ಒಬ್ಬ ಕೂಲಿ ಕಾರ್ಮಿಕ ಇರಬಹುದು ಅಥವಾ ಬಡವರು ಇರಬಹುದು ಅಥವಾ ದಲಿತ ವರ್ಗದವರು ಅಥವಾ ಬೇರೆ ಬೇರೆ ವರ್ಗದವರು ಆಗಿರಬಹುದು, ಇವತ್ತಿನದಿವಸ ಎಲ್ಲಾ ವರ್ಗದವರಿಗೂ ಕೂಡ ಆಂಗ್ಲ ಭಾಷೆಯಲ್ಲಿ ತಮ್ಮ ಮಕ್ಕಳು ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ನಿಟ್ಟಿನಲ್ಲಿಯೇ ಎಲ್ಲರೂ ಆಸೆ ಪಡುತ್ತಿದ್ದಾರೆ. ಇಂತ ಜನರಿಗೆ ಒಳ್ಳೆಯ ವಿದ್ಯೆ ತಲುಪದೆ ಇರತಕ್ಕಂಥದ್ದು ನಿಜವಾಗಿಯೂ ಕೂಡ ನೋವು ತರತಕ್ಕಂಥ ವಿಚಾರ. ಇವತ್ತಿನ ಚಿವಸ ಬಹಳಷ್ಟು ಮಂದಿ ಇಂಗ್ಲೀಷ್‌ನ ವ್ಯಾಮೋಹಕ್ಕಾಗಿ ತಮ್ಮ ಮಕ್ಕಳು ಕನ್ವೆಂಟ್ ಸ್ಕೂಲ್‌ನಲ್ಲಿ ಓದಬೇಕೆಂದು ಬಹಳಷ್ಟು ಹಣವನ್ನು ಖರ್ಚು ಮಾಡಿಕೊಂಡು ಮತ್ತೆ ಸಾಲ ಮಾಡಿ ಪಕ್ಕದ ಪಟ್ಟಣಗಳಿಗೆ ಸೈಕಲ್‌ನಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಿ ಕಾನ್ವೆಂಟ್ ಸ್ಕೂಲ್ ನಲ್ಲಿ ಓದಿಸತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕಾಗಿ ಇವತ್ತು ನಮ್ಮ ಸರ್ಕಾರಿ ಶಾಲೆಗಳು ಉಳಿದು ಕೊಳ್ಳುವುದಕ್ಕೋಸ್ಕರ ಮತ್ತು ನಮ್ಮ ಮಾಧ್ಯಮ ಉಳಿದುಕೊಳ್ಳಬೇಕೆಂಬ ದೃಷ್ಟಿಯಿಂದ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರಥಮ ವರ್ಷದಿಂದಲೇ ಆಂಗ್ಲ ಭಾಷೆಯನ್ನು ಕಲಿಸತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು ಆಗುತ್ತದೆ ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಉದಾಹರೆಗೆ ನಾನು ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿದ್ದೇನೆ. ಮತ್ತು ಕನ್ನಡ ಸಾಹಿತ್ಯದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದುಕೊಂಡಿದ್ದೇನೆ. ಆದರೆ, ನನಗೆ ಬಹಳಷ್ಟು ಮುಗುಗರವಾಗುತ್ತಿದೆ, ಏಕೆಂದರೆ, ಇವತ್ತು ಸಭೆಯಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಆಗಬಹುದು ಮತ್ತು ಮಾನ್ಯ ಮಾಧುಸ್ವಾಮಿಯವರು ಆಗಬಹುದು ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಕೆಲವು ಪದಗಳು ನನಗೆ ಅರ್ಥ ಆಗಲಿಲ್ಲ. ಇಂಥ ಸಮಸ್ಯೆಗಳನ್ನು ಇವತ್ತಿನದಿವಸ

ಬಹಳಷ್ಟು ಜನರು ಎದುರಿಸುತ್ತಿದ್ದಾರೆ. ಇದಕ್ಕಾಗಿ ಪ್ರಥಮ ಹಂತವಾಗಿ ಸರ್ಕಾರಿ ಗ್ರಾಮಾಂತರ ಶಾಲೆಗಳಲ್ಲಿ 5ನೇ ತರಗತಿಯಿಂದ ಮಕ್ಕಳಿಗೆ ಎ,ಬಿ,ಸಿ,ಕಲಿಸುವುದಕ್ಕಿಂತ ಮುಂಚಿತವಾಗಿಯೇ ಅಂದರೆ 1ನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಕಲಿಸಿದರೆ ಒಳ್ಳೆಯದು. ಏಕೆಂದರೆ ನಗರ ಪ್ರದೇಶಗಳ್ಲಲಿ ವ್ಯಾಸಂಗ ಮಾಡತಕ್ಕಂಥ ಮಕ್ಕಳು ಎಲ್ಲಾ ರೀತಿಯ ಸೌಲಭ್ಯ ಉಳ್ಳತಕ್ಕಂಥವರಾಗಿದ್ದು, ಮತ್ತೆ ಕಾನ್ವೆಂಟ್‌ನಲ್ಲಿ ಓದತಕ್ಕಂಥ ಮಕ್ಕಳ ಬುದ್ದಿಗೆ ಸಮಾನವಾಗಿ ಬರುವುದಕ್ಕೆ ಇದೊಂದು ಅವಕಾಶವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಯಾರು ಬಡವರ ಮಕ್ಕಳಾಗಿದ್ದಾರೆ ಮತ್ತು ಯಾರು ಹಳ್ಳಿಗಳಲ್ಲಿ ಇದ್ದಾರೆ ಇಂಥವರ ಮಕ್ಕಳು ನಗರ ಪ್ರದೇಶದಲ್ಲಿರುವ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಅಂದರೆ ಆತನ ಬುದ್ದಿಗೆ ತಕ್ಕಂತೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನಗರ ಪ್ರದೇಶದಲ್ಲಿ ಇರತಕ್ಕಂಥ ಮಕ್ಕಳಿಗೆ ಹೆಚ್ಚಿನ ಬುದ್ಧಿ ಇರುತ್ತದೆ. ಹಳ್ಳಿಗಾಡಿನ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ದೊರಕದೇ ಇರುವ ರೀತಿಯಲ್ಲಿ ನಾವು ಇವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಅದಕ್ಕಾಗಿ 1 ನೇ ತರಗತಿಯಿಂದಲೇ ಇಂಗ್ಲೀಷ್ ಭಾಷೆಯ ಮಾಧ್ಯಮ ಅಲ್ಲ, ಇಂಗ್ಲೀಷ್ ಭಾಷೆಯನ್ನು ಕಲಿಸತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇವತ್ತಿನ ದಿವಸ ಎಲ್ಲಾ ಕ್ಷೇತ್ರಗಳು ಖಾಸಗಿ ವಲಯಗಳಾಗಿ ಸಾಕಷ್ಟು ಪರಿವರ್ತನೆಗೊಳ್ಳುತ್ತಿರುವುದರಿಂದ ಹಾಗೂ ಇವತ್ತಿನ ದಿವಸ ಸರ್ಕಾರಿ ಉದ್ಯಮಗಳನ್ನು ಖಾಸಗಿ ವಲಯಗಳಿಗೆ ನಾವು ಪರಿವರ್ತನೆ ಮಾಡತಕ್ಕಂಥ ಸಂದರ್ಭದಲ್ಲಿ ಇವತ್ತಿನ ದಿವಸ ಎಲ್ಲಾ ಖಾಸಗಿ ವಲಯಗಳಲ್ಲಿ ಕುಡ ಇಂಗ್ಲೀಷ್ ಭಾಷೆ ಮಾತನಾಡತಕ್ಕಂಥವರಿಗೆ ಮಾತ್ರ ಉದ್ಯೋಗವನ್ನು ಕೊಡತಕ್ಕಂಥ ಒಂದು ಅವಕಾಶ ಮತ್ತು ಜವಾಬ್ದಾರಿಯನ್ನು ಇವತ್ತು ಖಾಸಗಿ ವಲಯಗಳು ಮಾಡುತ್ತಿವೆ. ಕನ್ನಡದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಬಂದಿರತಕ್ಕಂಥ ಹಳ್ಳಿಗಾಡಿನ ಮಕ್ಕಳಿಗೆ ಇವತ್ತು ಖಾಸಗಿ ವಲಯಗಳಲ್ಲಿ ಸರಿಯಾದ ನೌಕರಿ ಸಿಗುತ್ತಿಲ್ಲ. ಈ ರೀತಿಯಾದ ಸಮಸ್ಯೆಗಳನ್ನು ನಮ್ಮ ಗ್ರಾಮೀಣ ಪ್ರದೇಶದ ಮಕ್ಕಳು ಅನುಭವಿಸುತ್ತಿದ್ದಾರೆ. ಆದ್ದರಿಂದ, ಯಾವುದೇ ಸಂದರ್ಭದಲ್ಲಿ ಕುಡ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿಯಿಂದಲೇ ಇಂಗ್ಲೀಷ್ ಬಾಷೆಯನ್ನು ಕಲಿಸತಕ್ಕಂಥ ವ್ಯವಸ್ಥೆಯನ್ನು ದಯಮಾಡಿ ಸರ್ಕಾರ ಮಡಬೇಕು. ಇವತ್ತಿನ

ದಿವಸ ನಗರ ಪ್ರದೇಶದಲ್ಲಿರುತಕ್ಕಂಥ ಮಕ್ಕಳ ಬುದ್ಧಿಗೆ ಸಮನಾಗಿ ಹಳ್ಳಿಗಾಡಿನ ರೈತರ ಮಕ್ಕಳೂ ಕೂಡ ಬರಬೇಕು ಅಂದರೆ, ಇವತ್ತಿನ ದಿವಸ ಆಂಗ್ಲ ಭಾಷೆ ಬಹಳ ಮುಖ್ಯವಾಗಿರ ತಕ್ಕಂಥಾದ್ದು. ಆ ಭಾಷೆ ನಮಗೆ ಇವತ್ತಿನ ದಿವಸ ಬೇಕೇ ಬೇಕಾಗಿದೆ. ಇದಕ್ಕಾಗಿ ಪ್ರಾಥಮಿಕ ಹಂತದಿಂದ ಇಂಗ್ಲೀಷ್ ಭಾಷೆಯನ್ನು ಕಲಿಸತಕ್ಕಂಥ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದರೆ ಒಳ್ಳೆಯದು ಎನ್ನತಕ್ಕಂಥ ಮಾತನ್ನು ಹೇಳಿ ಈ ಸದನದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಛೇರ್ಮನ್ : ನರೇಂದ್ರಬಾಬು ಅವರು .....

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಛೇರ್ಮನ್‌ರವರೇ ಮಾನ್ಯ ನರೇಂದ್ರ ಬಾಬುರವರು ಇದಕ್ಕೆ ಸಿಗ್ನೇಟರಿ ಇದ್ದಾರೆ ಆದರೆ ನೀವು ಗಂಭೀರವಾಗಿರತಕ್ಕಂಥ ವಿಚಾರವನ್ನು ಈ ಸದನದಲ್ಲಿ ಶೂನ್ಯ ವೇಳೆಯ ಮೂಲಕ ಪ್ರಸ್ತಾಪ ಮಾಡುತ್ತಿದ್ದೀರಿ. ನಿಮ್ಮ ಚರ್ಚೆಗೆ ಮಾನ್ಯ ಶಿಕ್ಷಣ ಸಚಿವರು ಉತ್ತರವನ್ನು ಕೊಡಬೇಕಾಗುತ್ತದೆ. ಶಿಕ್ಷಣ ಸಚಿವರು ಸಧ್ಯಕ್ಕೆ ಆ ಹೌಸ್‌ನಲ್ಲಿದ್ದಾರೆ. ಆದ್ದರಿಂದ ಇದನ್ನು ಇನ್ನೊಂದು ಯಾವುದಾದರೊಂದು ರೂಲ್ ಕೆಳಗೆ ತಂದು ಅಥವಾ ಕನ್ವರ್ಟ್ ಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ, ಸದನದಲ್ಲಿ ಮಾನ್ಯ ಸದಸ್ಯರುಳು ಚರ್ಚೆ ಮಾಡಬಹುದು, ಉತ್ತರವನ್ನು ಹೇಳಬಹುದು, ಇದಕ್ಕೆ ಒಂದು ಅಂತಿಮ ತೆರೆಯನ್ನು ಹಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ :ಮಾನ್ಯ ಛೇರ್ಮನ್‌ರೆ ಮಾನ್ಯ ಮಂತ್ರಿಗಳು ಹೇಳುವ ಪ್ರಕಾರ ಇದು ಇಡೀ ರಾಜ್ಯದ ಸಮಸ್ಯೆ . ಇಡೀ ರಾಜ್ಯದಲ್ಲಿ ಕನ್ನಡದ ಬಗ್ಗೆ ಇರುವಂಥ ವಿಚಾರಗಳ ಬಗ್ಗೆ ನಡೆಯುತ್ತಿರುವಂಥ ಒಮದು ವಿಶೇಷವಾದ ಚರ್ಚೆ. ಹಾಗಾಗಿ ಈ ಸದನದಲ್ಲಿ ಇದರ ಬಗ್ಗೆ ಎಲ್ಲಾ ಸದಸ್ಯರುಗಳೂ ಕೂಡ ಭಾಗವಹಿಸಬೇಕಾಗುತ್ತದೆ. ರಾಜ್ಯಾದ್ಯಂತ ಚರ್ಚೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಒಬ್ಬರು ಪ್ರಸ್ತಾಪ ಮಾಡಿದರು, ಸರ್ಕಾರದ ಯಾರೋ ಒಬ್ಬರು ಮಂತ್ರಿಗಳು ಉತ್ತರವನ್ನು ಕೊಟ್ಟರು ಎಂದು ಒಂದು ತರಹ ರೂಲಿಂಗ್ ಕೊಡುವ ರೂಪದಲ್ಲಿ ಆಗಬಾರದು. ಆದ್ದರಿಂದ ತಾವು ಹೇಳುತ್ತಿರುವಂಥಾದ್ದು ಸರಿಯಾಗಿದೆ. ಇದು ಕನ್ನಡ ಭಾಷೆಯ ಬಗ್ಗೆ ಇಡೀ ರಾಜ್ಯದ ಒಂದು ಪ್ರಶ್ನೆಯಾಗಿರುವುದರಿಂದ ದಯವಿಟ್ಟು ತಾವು ಅರ್ಧಗಂಟೆ ಚರ್ಚೆಗೆ

ಅವಕಾಶವನ್ನು ಮಾಡಿಕೊಡಿ, ಇಡಿ ಸದನ ಇದರಲ್ಲಿ ಭಾಗವಹಿಸಿ ಚರ್ಚೆಯನ್ನು ಮಾಡಬೇಕು ಮತ್ತು ಕನ್ನಡದ ಬಗ್ಗೆ ಇರುವಂಥ ಗೌರವವನ್ನು ಉಳಿಸಿಕೊಳ್ಳಬೇಕಾಗಿದೆ. ದಯವಿಟ್ಟು ಎಲ್ಲರಿಗೂ ಅನುಕೂಲವಾಗುವ ದಿಕ್ಕಿನಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಈ ವರ್ಷದಲ್ಲಿ ಬರುವ ಪ್ರಶ್ನೆ ಅಲ್ಲ. ಏಕೆಂದರೆ ಈ ಒಂದು ಕನ್ನಡದ ವಿಚಾರ, ಇಂಗ್ಲೀಷನ್ನು ಸೇರಿಸಬೇಕೋ ಅಥವಾ ಬೇಡವೋ ಎನ್ನುವಂಥ ವಿಚಾರ ಈ ಒಂದು ಅಕಾಡೆಮಿಕ್ ವರ್ಷದಲ್ಲೂ ಬರುವುದಿಲ್ಲ. ಇದು ಮುಂದಿನ ವರ್ಷದಿಂದ ಆಗುತ್ತಿರುವುದರಿಂದ ದಯವಿಟ್ಟು ಪೂರ್ತಿಯಾಗಿ ಚರ್ಚೆ ಮಾಡುವುದಕ್ಕೆ ತಾವು ಈ ಸದನದಲ್ಲಿ ಅವಕಾಶವನ್ನು ಮಾಡಿಕೊಡಬೇಕು.

ಛೇರ್ಮನ್ : ಅರ್ಧಗಂಟೆ ಚರ್ಚೆಗೆ ಅವಕಾಶವಿದೆ.

ಶ್ರೀ ವಾಟಳ್ ನಾಗರಾಜ್ : ಮಾನ್ಯ ಛೇರ್ಮನ್ನರೆ, ಚರ್ಚೆಗೆ ಅವಕಾಶವನ್ನು ಮಾಡಿಕೊಡುವುದು ಒಳ್ಳೆಯದು. ಆರೋಗ್ಯಕರವಾದ ಒಂದು ಚರ್ಚೆ ನಡೆಯಲಿ. ನಾವಂತೂ ಪ್ರಬಲವಾಗಿ ಇಂಗ್ಲೀಷನ್ನು ಹೆಜ್ಜೆ ಹೆಜ್ಜೆಗೂ ವಿರೋಧ ಮಾಡುತ್ತೇವೆ. ಇಂಗ್ಲೀಷ್ ಇರಬೇಕು ಎನ್ನುವುದರ ಬಗ್ಗೆ ಸರ್ಕಾರ ತೀರ್ಮಾನ ಮಾಡಿದರೆ ಸರ್ಕಾರ ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಛೇರ್ಮನ್ನರೆ, ಮಾನ್ಯ ಸದಸ್ಯರಾದ ಅನ್ನದಾನಿಯವರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ಶಿಕ್ಷಣ ಸಚಿವರಿಗೆ ಹೇಳಿದ್ದೇನೆ ಮತ್ತು ಇದೊಂದು ಪತ್ರಿಕೆಯಲ್ಲಿ ಬರುತ್ತಿದ್ದು, ದೊಡ್ಡ ವಿವಾದ ಕೂಡ ಬೆಳೆಯುತ್ತಿರುವುದರಿಂದ ಇದಕ್ಕೆ ಸಮಗ್ರವಾದ ರೀತಿಯಲ್ಲಿ ಚರ್ಚೆಯಾಗತಕ್ಕಂಥ ರೀತಿಯಲ್ಲಿ ಶುಕ್ರವಾರ ಸಾಯಂಕಾಲ ನಾವು ಒಂದು ಸಭೆಯನ್ನು ಕರೆದಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಸಾರ್ವಜನಿಕರು ಮತ್ತು ಕನ್ನಡದ ಬಗ್ಗೆ ಕೆಲವು ಸಮಿತಿಗಳೂ ಇದ್ದು, ಇಂಗ್ಲೀಷನ್ನೂ ಕೂಡ ಮಾಡಬೇಕು ಎಂದು ಕೂಡ ಇದೆ. ಇವೆಲ್ಲವನ್ನು ಪರಸ್ಪರ ಸಮಾಲೋಚನೆ ಮಾಡತಕ್ಕಂಥ ರೀತಿಯಲ್ಲಿ ಸಭೆ ಕೂಡ ಮಾಡಬೇಕೆಂದು ನಾನು ಹೇಳಿದ್ದೇನೆ. ಶಿಕ್ಷಣ ಸಚಿವರೂ ಕೂಡ ಸಭೆಯನ್ನು ಕರೆದಿದ್ದಾರೆ, ಆ ಸಭೆಯಲ್ಲಿ ಅದರ ಬಗ್ಗೆ ಸಮಗ್ರವಾದ ಚರ್ಚೆಯಾಗಿ

ಯಾವ ರೀತಿಯಾಗಿ ಮುಂದೆ ಹೋಗಬೇಕು ಎನ್ನುವ ರೀತಿಯಲ್ಲಿ ನಿಮಗೂ ಕೂಡ ಆಹ್ವಾನ ಕೊಡುತ್ತಿದ್ದೇವೆ.

ಶ್ರೀ ವಾಟಳ್ ನಾಗರಾಜ್ : ಈ ವಿಚಾರದಲ್ಲಿ ನಾನು ಆಹ್ವಾನ ಕೊಡದಿದ್ದರೂ ಬರುತ್ತೇನೆ, ತಾವು ಹೆಜ್ಜೆ ಇಡುವಾಗ ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನು ಇಡಿ. ಇದು ಅಪಾಯಕಾರಿ ಬೆಳವಣಿಗೆ, ಎಲ್ಲರೂ ಕೂಡ ಬೆಂಕಿಗೆ ಕೈಯನ್ನು ಹಾಕುವುದಕ್ಕೆ ಹೋಗಬೇಡಿ. ನಾನು ತಮಗೆ ಬಹಳ ಅತ್ಯಂತ ವಿಶ್ವಾಸದಿಂದ ಹೇಳುವಂಥ ಮಾತಿದು.

ಶ್ರೀ ಧರ್ಮಸಿಂಗ್ : ನಾವು ಹೆಜ್ಜೆಯನ್ನು ಇಡುವಾಗ ಬಹಳ ಜಾಗ್ರತೆಯಿಂದ ತಮ್ಮ ಅಭಿಪ್ರಾಯ ಏನಿದೆ ಅದನ್ನು ಕೂಡ ಸಂಗ್ರಹಗೆ ಮಾಡಿ ಅದರ ಬಗ್ಗೆ ಸರ್ಕಾರ ಮುಂದಿನ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಛೇರ್ಮನ್‌ರೆ, ಶುಕ್ರವಾರ ದಿವಸ ಕರೆದಿರುವ ಆ ಸಭೆಯಲ್ಲಿ ಸದನದ ಎಲ್ಲಾ ಸದಸ್ಯರಿಗೂ ಭಾಗವಹಿಸುವುದಕ್ಕಾಗುವುದಿಲ್ಲ. ರಾಜ್ಯದ ಎಲ್ಲಾ ಭಾಗದಿಂದ ಬಂದಿರುವಂಥ ಸದಸ್ಯರುಗಳಿಗೆ ಅವರ ಅಭಿಪ್ರಾಯಗಳನ್ನು ಅಲ್ಲಿ ಹೇಳುವುದಕ್ಕಾಗುವುದಿಲ್ಲ. ಇದು ಈ ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ. ಕೆಲವರ ನಾನು ಏನು ಹೇಳುತ್ತೇನೆಂದರೆ, ನಮ್ಮ ಮನೆಯ ಮಕ್ಕಳನ್ನು ನಾವು ಇಂಗ್ಲೀಷ್ ಶಾಲೆಗಳಿಗೆ ಕಳುಹಿಸುವಂಥದ್ದು ನಮ್ಮಮನೆಯ ಮೊಮ್ಮಕ್ಕಳನ್ನು ಇಂಗ್ಲೀಷ್ ಶಾಲೆಗಳಿಗೆ ಕಳುಹಿಸಿಕೊಡುವಂಥದ್ದು ಮಾಡುತ್ತೇವೆ. ಆದರೆ ಗ್ರಾಮೀಣ ಪ್ರದೇಶದ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಿಸುವಂಥದ್ದು, ಅವರು ಕನ್ನಡದಲ್ಲಿಯೇ ಕಲಿಸಲಿ, ಆದರೆ ಒಂದು ವಿಷಯವನ್ನು ಆಂಗ್ಲ ಭಾಷೆಯನ್ನು ಕಲಿಸಬೇಕು ಎನ್ನುವಂಥದ್ದು. ಏಕೆಂದರೆ ಇವತ್ತು ಸರ್ಕಾರ ಉದ್ಯೋಗವನ್ನು ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ಖಾಸಗಿ ಸಂಸ್ಥೆಗಳಿಗೆ ಉದ್ಯೋಗಕ್ಕೆ ಹೋಗಬೇಕಾಗುತ್ತದೆ. ಸರ್ಕಾರ ಉದ್ಯೋಗವನ್ನು ಕೊಡುವುದಿದ್ದರೆ ಬರೀ ಕನ್ನಡವನ್ನು ಕಲಿಸಿದರೆ ನಾನು ಒಪ್ಪುತ್ತಿದ್ದೆ. ಸರ್ಕಾರ ಕನ್ನಡ ಕನ್ನಡದಲ್ಲಿ ಕಲಿತಂಥ ಎಲ್ಲರಿಗೂ ನೀವು ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದರೆ ನೀವು ಕನ್ನಡದಲ್ಲೇ ಕಲಿಸಿ. ಆಂಗ್ಲ ಭಾಷೆ ಕಲಿಯುವ ಅವಶ್ಯಕತೆ ಇಲ್ಲವೆಂದು ನಾನು ಹೇಳುತ್ತೇನೆ. ಆದರೆ ಸರ್ಕಾರದವರು ನೀವು ಇವತ್ತು ಹುದ್ದೆಗಳನ್ನು ಕಮ್ಮಿ ಮಾಡುತ್ತಾ ಹೋಗುತ್ತೀರಿ.

ಅವರು ಖಾಸಗಿ ಸಂಸ್ಥೆಗಳಿಗೆ ಉದ್ಯೋಗಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಹೋಗುವಾಗ ಇಂಗ್ಲೀಷ್ ಗೊತ್ತಿಲ್ಲದಿದ್ದರೆ ಉದ್ಯೋಗ ಸಿಗುವುದಿಲ್ಲ. ಅದಕ್ಕೋಸ್ಕರ ಅವರು ಒಂದನೇ ತರಗತಿಯಿಂದ ಎಬಿಸಿಡಿ ಯನ್ನು ಕಲಿಯಲಿಕ್ಕೆ ಶುರು ಮಾಡಿದರೆ ಅಲ್ಲಿ ಹೋಗಿ ಧೈರ್ಯವಾಗಿ ಇಂಟರ್‌ವ್ಯೂವ್‌ನ್ನು ಫೇಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವರಿಗೆ ಉದ್ಯೋಗ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ ಇವತ್ತೇ ಚರ್ಚೆ ಮಾಡೋಣ

ಛೇರ್ಮನ್ : ಇಲ್ಲ, ಶೂನ್ಯ ವೇಳೆಯಲ್ಲಿ ಪ್ರಸ್ತಾಪವನ್ನು ಎರಡು ಜನ ಮಾನ್ಯ ಸದಸ್ಯರು ಮಾಡಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ನಾನು ಹೇಳುವುದು ಈ ಸದನದಲ್ಲಿ ಚರ್ಚೆಯಾಗಬೇಕು ಅಂತ.

ಛೇರ್ಮನ್ : ಈಗ ಮಾನ್ಯ ಕಾನೂನು ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮುಂದೆ ಇದರ ಬಗ್ಗೆ ವಿಸ್ತೃತವಾದ ಚರ್ಚೆಯಾಗಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸಭಾನಾಯಕರೂ ಕೂಡ ಹೇಳಿದ್ದಾರೆ. ಶುಕ್ರವಾರ ದಿವಸ ಸಭೆಗೆ ಬೇರೆ ಬೇರೆ ಪ್ರಮುಖರನ್ನು ಕೂಡ ಕರೆದಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಬೇರೆ ಬೇರೆ ಸಂಘ ಸಂಸ್ಥೆಗಳನ್ನು ಕರೆದಿದ್ದಾರೆ. ನಾವು ಹೇಳುವುದು ಅದು ಅಲ್ಲ. ಈ ಸದನದಲ್ಲಿ ಚರ್ಚೆಯಾಗಬೇಕು.

ಮಾನ್ಯ ಸದಸ್ಯರು : ಮಾನ್ಯ ಛೇರ್ಮನ್‌ರೇ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ವಿವಿಧ ರೀತಿಯ ಸಮಸ್ಯೆಗಳನ್ನು ಇವತ್ತು ಎದುರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಛೇರ್ಮನ್‌ರೆ, ಶುಕ್ರವಾರ ದಿವಸದ ಸಭೆಯಲ್ಲಿ ಅಭಿಪ್ರಾಯಗಳನ್ನು ಸಂಗ್ರಹ ಮಾಡುವಂಥದ್ದು ಸರ್ಕಾರದ ವತಿಯಿಂದ ನಡೆಯಲಿ. ಆದರೆ ಇದು ಈಸದನದಲ್ಲಿಯೂ ಚರ್ಚೆಯಾಗಲಿ. ಏಕೆಂದರೆ ಭಾಷೆ ಕೇವಲ ಉದ್ಯೋಗಕ್ಕೆ ಅಷ್ಟೇ ಸೀಮಿತವಾಗಿರುವಂಥದ್ದಲ್ಲ, ಮಾತನಾಡುವಂಥದ್ದಕ್ಕೆ ಅಷ್ಟೇ ಸೀಮಿತವಾಗಿರುವಂಥದ್ದಲ್ಲ. ಭಾಷೆ ಎನ್ನುವುದು ಒಂದು ಸಂಸ್ಕಾರ ಪಡಿಯುವಂಥ ವಿಷಯ ಭಾಷೆ ನಮಗೆ ಒಂದು ಸಂಸ್ಕಾರವನ್ನು ಕೊಡುತ್ತದೆ. ಹಾಗಾಗಿ ಇದನ್ನು ಬಹಳ ಸೀಮಿತವಾದ

ದೃಷ್ಟಿಕೋನದಿಂದ ನೋಡುವಂಥ ವಿಷಯವಲ್ಲ. ಇದು ಉದ್ಯೋಗಕ್ಕೆ ಸೀಮಿತವಾದಂಥದ್ದು, ಮಾತನಾಡುವುದಕ್ಕೆ ಸೀಮಿತವಾದಂಥದ್ದು, ಈ ರೀತಿಯ ವಾದಗಳು ಸಮರ್ಪಕವಾದಂಥದ್ದಲ್ಲ. ಹಾಗಾಗಿ ಮಾತೃ ಭಾಷೆಯಲ್ಲಿ ಶಿಕ್ಷಣ ಆಗಬೇಕು ಎನ್ನುವುದಕ್ಕೆ ಕಾರಣ ಯೋಗ್ಯವಾದ ಸಂಸ್ಕಾರ ಕುಡ ನಮಗೆ ಸಿಗಬೇಕು ಎನ್ನುವ ಮಹದಾಸೆಯ ಉದ್ದೇಶ ಕುಡ ಇದೆ. ಹಾಗಾಗಿ ಈ ಸದನದಲ್ಲಿ ಇದಕ್ಕೆ ವಿಸ್ತೃತವಾದ ಚರ್ಚೆಯಾಗಬೇಕು. ತಾವು ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಈಗ ಒಂದು ಹಂತಕ್ಕೆ ಬಂದಿದ್ದೇವೆ. ಮಾನ್ಯ ನರೇಂದ್ರ ಬಾಬುರವರೇ ನಿಮ್ಮ ಸ್ನೇಹಿತರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಚರ್ಚೆಯನ್ನು ಬೇರೆ ರೂಪದಲ್ಲಿ ತರೋಣ ಎಂದು ಸಭೆಯು ಅಭಿಪ್ರಾಯ ಪಟ್ಟಿದೆ. ಆದ್ದರಿಂದ ನೀವು ಬೇರೆ ಸಂದರ್ಭದಲ್ಲಿ ಮಾತನಾಡಬಹುದು.

ಶ್ರೀ ಎಸ್.ಎಲ್.ಧರ್ಮೇಗೌಡ : ಮಾನ್ಯ ಛೇರ್ಮನ್‌ರೆ, ದಯಮಾಡಿ ಸದನದಲ್ಲಿ ಯಾವಾಗ ಚರ್ಚೆಗೆ ಅವಕಾಶ ನೀಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಛೇರ್ಮನ್ನರೆ, ತಾವು ಅದನ್ನು ಸ್ಪಷ್ಟವಾಗಿ ಹೇಳಿ ಬಿಡಬೇಕು, ಏಕೆಂದರೆ ಇಡೀ ರಾಜ್ಯದ ಜನತೆ ನೋಡುತ್ತಿರುತ್ತಾರೆ. ಶುಕ್ರವಾರ ದಿವಸ ತಾವು ಸಭೆಯನ್ನು ಕರೆದಿರುತ್ತೀರಿ. ಅದಕ್ಕೆ ನಾವು ಸ್ವಾಗತವನ್ನು ಕೋರುತ್ತೇವೆ. ಅದೇ ರೀತಿಯಲ್ಲಿ ಸದನದಲ್ಲಿ ಕೂಡ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡುತ್ತೀರಾ ಎನ್ನುವುದನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಛೇರ್ಮನ್ : ಸದನದ ಚರ್ಚೆಗೂ ಅವಕಾಶವಿದೆ.

ಶ್ರೀ ಎಸ್.ಎಲ್.ಧರ್ಮೇಗೌಡ : ಇವರ ಮಕ್ಕಳನ್ನು ಮಾತ್ರ ಇವರು ಇಂಗ್ಲೀಷನಲ್ಲಿ ಓದಿಸುವುದು. ಹಳ್ಳಿಯ ಮಕ್ಕಳು ಇಂಗ್ಲೀಷ್ ಓದಬಾರದು.

ಶ್ರೀ ಧರ್ಮಸಿಂಗ್ :– ಛೇರ್ಮನ್‌ರೆ, ಕನ್ನಡ ಭಾಷೆಯ ಬಗ್ಗೆ ಸಾಕಷ್ಟು ವಿಚಾರಗಳು ಮಾಧ್ಯಮದಲ್ಲಿ ಬರುತ್ತಿವೆ. ಇದರ ಬಗ್ಗೆ ಒಂದು ಸಮಗ್ರವಾದ ಚರ್ಚೆಯಾಗಬೇಕು. ಕೆಲವು ಸಂಘ ಸಂಸ್ಥೆಗಳು ಇವೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿದ್ದಾರೆ, ಜಿ.ನಾರಾಯಣ ಇದ್ದಾರೆ ಮತ್ತು ಬೇರೆಯವರು ಕೂಡ ಇದ್ದಾರೆ. ಇವರೆಲ್ಲರನ್ನು ಕರೆಸಿ ಮತ್ತು ಶಾಸಕರನ್ನೂ ಕೂಡ ಕರೆಯಿಸಿ ಒಂದು ಸಭೆಯನ್ನು ಮಾಡೋಣ. ಸಭೆಯನ್ನು ಮಾಡಿ ಅವರಲ್ಲಿರುವ ಭಾವನೆಗಳನ್ನು ತಿಳಿದುಕೊಂಡು

ಈ ಸದನದಲ್ಲಿ ಕೂಡ ಚರ್ಚೆ ಮಾಡಿ ಅದರ ಬಗ್ಗೆ ಒಂದು ತೀರ್ಮಾನಕ್ಕೆ ಬರೋಣ.

ಛೇರ್ಮನ್ : ಸರಿ, ಈಗ ಮುಂದಕ್ಕೆ ಹೋಗೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಛೇರ್ಮನ್‌ರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಶಿಡ್ಲಘಟ್ಟ ಘಟನೆಯ ಬಗ್ಗೆ ಹೇಳಿಕೆಯನ್ನು ಕೊಡಬೇಕಾಗಿತ್ತು.

ಛೇರ್ಮನ್ : ಮಾನ್ಯ ಶ್ರೀರಾಮರೆಡ್ಡಿಯವರೆ, ಈಗ ಶೂನ್ಯ ವೇಳೆ ನಡೆಯುತ್ತಿರುವುದರಿಂದ ಒಂದೆರಡು ಹೆಸರುಗಳು ಇವೆ, ಶೂನ್ಯವೇಳೆ ಯನ್ನು ಮುಗಿಸಿಬಿಡೋಣ.

(ಆ) ವಿಷಯ :– ನ್ಯಾಷನಲ್ ಟ್ರಾವೆಲ್ಸ್ ಬಸ್ಸಿನ ಮುಖಾಂತರ 40 ಲಕ್ಷ ರೂ. ಖೋಟಾ ನೋಟುಗಳ ಸಾಗಾಣಿಕೆ ಆಗಿರುವುದರ ಬಗ್ಗೆ.

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ) : ಮಾನ್ಯ ಛೇರ್ಮನ್‌ರವರೇ ಎರಡು ದಿವಸಗಳ ಕೆಳಗಡೆ ಚಾಮರಾಜಪೇಟೆಯಿಂದ ಮಹಾರಾಷ್ಟ್ರಕ್ಕೆ ನ್ಯಾಷನಲ್ ಟ್ರಾವೆಲ್ಸ್ ಎನ್ನುವಂತಹ ಬಸ್ಸಿನ ಮುಖಾಂತರ 40 ಲಕ್ಷ ರೂ.ಗಳ ಖೋಟಾನೋಟನ್ನು ಸಾಗಾಣಿಕೆ ಮಾಡಿದಂಥ 5 ಜನರ ಬಗ್ಗೆ ಮಹಾರಾಷ್ಟ್ರದ ಸಾಂಗ್ಲಿ ಪೋಲೀಸರು ತನಿಖೆಯನ್ನು ಆರಂಭ ಮಾಡಿದ್ದಾರೆ. ಕಳೆದ 4–5 ತಿಂಗಳುಗಳಿಂದ ಬೆಂಗಳೂರುನ ಕಾಟನ್‌ಪೇಟೆಯ ಲಾಡ್ಜ್ ಒಂದರಲ್ಲಿ ಒಂದು ಲಕ್ಷ ರೂ.ಗಳ ಖೊಟಾನೋಟುಗಳು ವಶವಾಗಿವೆ. ಸುಳ್ಯದಲ್ಲಿ ಕುಡ ಖೋಟಾನೋಟು ಇವತ್ತು ಸಿಕ್ಕಿದೆ. ಇವತ್ತು ಈ ಖೋಟಾ ನೋಟುಗಳು ನ್ಯಾಷನಲ್ ಟ್ರಾವೆಲ್ಸ್ ಮುಖಾಂತರ ಇದು ಸಾಗಾಣಿಕೆಯಾಗುತ್ತಿದೆ ಎನ್ನುವಂಥದ್ದು ದಿನನಿತ್ಯದ ಪತ್ರಿಕೆಗಳಲ್ಲಿ ಬಂದ ನಂತರ ನ್ಯಾಷನಲ್ ಟ್ರಾವೆಲ್ಸ್ ಒಡೆತನದ ಬಗ್ಗೆ ಕೂಡ ಇವತ್ತು ಪತ್ರಿಕೆಗಳಲ್ಲಿ ಚರ್ಚೆಯಾಗಿದೆ. ಹಾಗಾಗಿ ಖೋಟಾನೋಟಿನ ಚಲಾವಣೆಯ ಮುಖಾಂತರ ಇಡೀ ರಾಜ್ಯದ ಆರ್ಥಿಕತೆ ಇವತ್ತು ಬುಡಮೇಲು ಆಗುವಂಥ ಹಿನ್ನೆಲೆಯಲ್ಲಿ ಸರ್ಕಾರ ಇದರ ಬಗ್ಗೆ ತಕ್ಷಣದಲ್ಲಿ ಗಮನ ಹರಿಸಬೇಕು. ಇದರ ಜೊತೆಗೆ ಒಂದು ಮಾಹಿತಿಯನ್ನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ನಾನು ಕೊಡುವುದೇನೆಂದರೆ, ನ್ಯಾಷನಲ್ ಟ್ರಾವೆಲ್ಸ್‌ನ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದೆ ಕೂಡ ಹುಬ್ಬಳ್ಳಿಯ ಮುಖಾಂತರ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ನ್ಯಾಷನಲ್ ಟ್ರಾವೆಲ್ಸ್